ಉದಾಹರಣೆಗಳು ನಮ್ಮಲ್ಲಿ ಕಡಿಮೆ. ಜಪಾನಿ–ಇರಾನಿ ಸಿನಿಮಾಗಳ ಮಾದರಿಯನ್ನು ಸ್ಥಳೀಯವಾಗಿ ಅಳವಡಿಸಿಕೊಂಡು ಮಾಡಿದ ಕಾರಣಕ್ಕಾಗಿ ಚಾರ್ಲಿ ಜನರಿಗೆ ಇಷ್ಟವಾಯಿತು. ಶ್ವಾನಪ್ರಿಯರ ಸಂಖ್ಯೆ ಹೆಚ್ಚಾಗಿರುವುದು ಹಾಗೂ ಕೋವಿಡೋತ್ತರ ಕಾಲಘಟ್ಟದಲ್ಲಿ ಸಾಕುನಾಯಿಗೆ ಹೆಚ್ಚಿನ ಮಹತ್ವ ದೊರೆತಿರುವುದೂ ಚಾರ್ಲಿಯ ಯಶಸ್ಸಿಗೆ ಕಾರಣವಾಗಿರಬಹುದು ಎನ್ನುವ ವಿಶ್ಲೇಷಣೆ ಅವರದು.

ಮಾರ್ಕೆಟಿಂಗ್ ನಿಟ್ಟಿನಲ್ಲಿ ಕನ್ನಡ ಸಿನಿಮಾಗಳನ್ನು ಎತ್ತಿನಿಲ್ಲಿಸುವ ಪ್ರಯತ್ನಗಳು ನಡೆಯುತ್ತಿದ್ದರೂ, ಕಟ್ಟುವ ಕ್ರಿಯೆಯಲ್ಲಿ ಕನ್ನಡ ಸಿನಿಮಾ ನಿರ್ಮಾತೃಗಳ ಸ್ವಂತಿಕೆಯ ಬಗ್ಗೆ ಖಜಾನೆ ಅವರಿಗೆ ಪ್ರಶ್ನೆಗಳಿವೆ. ‘ಕನ್ನಡದ ಸಿನಿಮಾ’ ಅಂತ ಕಟ್ಟುವ ಕೆಲಸ ನಮ್ಮಲ್ಲಿ ನಡೆದಿರುವುದು ಕಡಿಮೆ. ಈ ವರ್ಷವೂ ಅಷ್ಟೇ ಎನ್ನುವಾಗ ಅವರ ಧ್ವನಿಯಲ್ಲಿ ವಿಷಾದ ಇಣುಕುತ್ತದೆ. 2022ರಲ್ಲಿ ಗಮನಾರ್ಹ ಸಿನಿಮಾ ಎಂದು ನಿರ್ದಿಷ್ಟವಾಗಿ ಯಾವ ಚಿತ್ರವನ್ನೂ ಅವರು ಗುರ್ತಿಸುವುದಿಲ್ಲವಾದರೂ, ‘ಬನಾರಸ್’ ಚಿತ್ರವನ್ನು ಗಾಢ ಕಥನದ ಕಾರಣಕ್ಕಾಗಿ ನೆನಪಿಸಿಕೊಳ್ಳಲು ಬಯಸುತ್ತಾರೆ. ‘ಮುಂಗಾರುಮಳೆ’ಯ ಗಣೇಶ್ ಪ್ರೇಮದ ಮಾದರಿಯಲ್ಲಿ ಸಿಕ್ಕಿಬಿದ್ದಿದ್ದ ಕನ್ನಡ ಚಿತ್ರರಂಗದ ಪ್ರೇಮಕಥನದ ಪಥ ‘ಬನಾರಸ್’ನಲ್ಲಿ ಬೇರೆ ದಿಕ್ಕು ಪಡೆದುಕೊಂಡಿರುವುದು ಅವರ ಗಮನಕ್ಕೆ ಬಂದಿದೆ. ಹೊಸಬರ ತಂಡ ಕಟ್ಟಿಕೊಂಡು, ಪ್ರೀತಿಯನ್ನು ಆಧ್ಯಾತ್ಮಿಕವಾಗಿ ಚಿತ್ರಿಸಿರುವ ನಿರ್ದೇಶಕರ ಪ್ರಯತ್ನ ಅವರ ಗಮನಸೆಳೆದಿದೆ.



ರಿಶಬ್ ಶೆಟ್ಟಿ ನಟನೆಯ ಕಾಂತಾರ ಸಿನಿಮಾದ ದೃಶ್ಯ



ವಿಜಯ್ ನಾಯಕರಾಗಿ ಅಭಿನಯಿಸಿದ್ದ ಕೊನೆಯ ಸಿನಿಮಾ ಎನ್ನುವ ಭಾವಸ್ಪರ್ಶ ಈ ಚಿತ್ರಕ್ಕಿತ್ತು. ಪ್ರವೀಣ್ ಕೃಪಾಕರ್ ನಿರ್ದೇಶನದ ‘ತಲೆದಂಡ’ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಕಾಣಲಿಲ್ಲ. ಆದರೆ, ಸಿನಿಮಾ ನೋಡಿದವರೆಲ್ಲರ ಮನಸ್ಸಿನಲ್ಲೂ ವಿಜಯ್ ಎಂಥ ಅದ್ಭುತ ನಟ ಎನ್ನುವ ಭಾವವನ್ನು ‘ತಲೆದಂಡ’ ಮತ್ತಷ್ಟು ಗಾಢವಾಗಿಸಿತು. ಪರಿಸರ ಕಾಳಜಿ ವಿಭಾಗದಲ್ಲಿ ‘ತಲೆದಂಡ’ ರಾಷ್ಟ್ರಪ್ರಶಸ್ತಿಯನ್ನೂ ಪಡೆಯಿತು. ಆದರೆ, ವಿಜಯ್ ಅವರ ಉತ್ತಮ ನಟನೆಗಾಗಿ ನಿರೀಕ್ಷಿಸಲಾಗಿದ್ದ ಅತ್ಯುತ್ತಮ ನಟ ಪ್ರಶಸ್ತಿ ಸಲ್ಲದೆ ಹೋದುದು ಚಿತ್ರರಸಿಕರ ಬೇಸರಕ್ಕೆ ಕಾರಣವಾಯಿತು.

ಮೇ ತಿಂಗಳಲ್ಲಿ ತೆರೆಕಂಡ ‘ಮ್ಯಾನ್ ಆಫ್ ದಿ ಮ್ಯಾಚ್’, ‘ಅವತಾರ ಪುರುಷ’, ‘ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ’, ‘ಸಕುಟುಂಬ ಸಮೇತ’ ಹಾಗೂ ‘ಕೋಳಿ ತಾಳ್’ ಸಿನಿಮಾಗಳು ಬೇರೆ ಬೇರೆ ಕಾರಣಗಳಿಗಾಗಿ ಗಮನಸೆಳೆದವು. ‘ರಾಮಾ ರಾಮಾ ರೇ’ ಹಾಗೂ ‘ಒಂದಲ್ಲಾ ಎರಡಲ್ಲಾ’ ಸಿನಿಮಾಗಳ ಖ್ಯಾತಿಯ ಸತ್ಯಪ್ರಕಾಶ್ ನಿರ್ದೇಶನದ ‘ಮ್ಯಾನ್ ಆಫ್ ದಿ ಮ್ಯಾಚ್’ ನಿರ್ದೇಶಕರ ಪ್ರಯೋಗಶೀಲತೆಯ ಆತ್ಮವಿಶ್ವಾಸದಲ್ಲಿ ಮೂಡಿಬಂದ ಸಿನಿಮಾ. ವಾಸುಕಿ ವೈಭವ್, ಧರ್ಮಣ್ಣ, ನಟರಾಜ್ ಪ್ರಧಾನ ಭೂಮಿಕೆಯಲ್ಲಿರುವ ಈ ಸಿನಿಮಾ ನೇರವಾಗಿ ಒಟಿಟಿಯಲ್ಲಿ ತೆರೆಕಂಡು, ಸಹೃದಯರ ಪಾಲಿಗೆ ‘ಮ್ಯಾನ್ ಆಫ್ ದಿ ಮ್ಯಾಚ್’ ಎನ್ನಿಸಿಕೊಂಡಿತು.

## ಸುಲಭವಲ್ಲದ ಸವಾಲು

**ಎಪ್ಪತ್ತು** ಎಂಬತ್ತರ ದಶಕದಲ್ಲಿ ಪ್ರಯೋಗಶೀಲ ಸಿನಿಮಾಗಳಿಂದಾಗಿ ಕನ್ನಡ ಚಿತ್ರರಂಗ ದೇಶದ ಗಮನಸೆಳೆದಿತ್ತು. ಕನ್ನಡದಲ್ಲಿ ನಡೆಯುತ್ತಿದ್ದ ಸಿನಿಮಾ ಪ್ರಯೋಗಗಳ ಬಗ್ಗೆ ನೆರೆಹೊರೆ ಭಾಷೆಗಳ ಸಹೃದಯರು ಬೆರಗುಗಣ್ಣಿನಿಂದ ನೋಡುತ್ತಿದ್ದರು. ಅದೇ ಕಾಲಕ್ಕೆ ಉತ್ತಮ ಮನರಂಜನಾ ಚಿತ್ರಗಳೂ ಕನ್ನಡದಲ್ಲಿ ರೂಪುಗೊಳ್ಳುತ್ತಿದ್ದವು. ನಂತರದ ವರ್ಷಗಳಲ್ಲಿ ಕನ್ನಡ ಸಿನಿಮಾ ವೈಭವ ಮಸುಕಾಗುತ್ತಾ ಬಂತು. ಅಂಥದೊಂದು ವೈಭವ ವ್ಯಾಪಾರಿ ಸಿನಿಮಾಗಳ ನೆಲೆಯಲ್ಲಿ ತಕ್ಕಮಟ್ಟಿಗೆ ಮರುಕಳಿಸುತ್ತಿರುವ ಸೂಚನೆ ಇತ್ತೀಚಿನ ವರ್ಷಗಳಲ್ಲಿ ಕಾಣಿಸುತ್ತಿದೆ. ಆ ಸೂಚನೆ ಗಾಢವಾಗಿ ಕಾಣಿಸಿರುವುದು 2022ರಲ್ಲಿ. ಯಶಸ್ಸಿನ ಈ ಪ್ರಭೆಯನ್ನು ಉಳಿಸಿಕೊಂಡು ಹೋಗುವ ಬಹುದೊಡ್ಡ ಸವಾಲು ಕನ್ನಡ ಚಿತ್ರರಂಗದ ಮುಂದಿದೆ.

ಕರ್ನಾಟಕದಾಚೆಗೂ ವಿಸ್ತಾರಗೊಂಡ, ‘ಪ್ಯಾನ್ ಇಂಡಿಯಾ’ ಹೆಸರಿನ ಸಿನಿಪೇಟೆಯಲ್ಲಿ ತನ್ನ ವರ್ಚಸ್ಸು ಮತ್ತು ಬೇಡಿಕೆ ಉಳಿಸಿಕೊಂಡು ಹೋಗುವುದು ಸುಲಭವೇನಲ್ಲ. ಯಶಸ್ಸಿನ ಮುಂದುವರಿಕೆಗೆ ಬಿಗ್ ಬಜೆಟ್ ಅಷ್ಟೇ ಸಾಲುವುದಿಲ್ಲ, ಸಶಕ್ತ ಕಥನಗಳೂ ಬೇಕು, ನೆಲದ ಗಂಧ ಬೇಕು. ಕಥೆ ಮತ್ತು ಸಿನಿಮಾ ಭಾಷೆಗಳನ್ನು ಹದವಾಗಿ ಮಿಳಿತಗೊಳಿಸುವ ಕಸುಬುದಾರಿಕೆ ಬೇಕು. ಇಲ್ಲದೆ ಹೋದರೆ, 2022ರ ಯಶಸ್ಸು ಆಕಸ್ಮಿಕ ಎನ್ನುವಂತಾಗುತ್ತದೆ.



‘ಗಂಧದಗುಡಿ’ಯ ಭಲೇಜೋಡಿ: ಪುನೀತ್ ಮತ್ತು ಅಮೋಘವರ್ಷ